ವಾರದ ಪತ್ರ

## ಬೇತಾಳನ ಕಥೆ ನೆನಪಾಗುತ್ತೆ

ನಮ್ಮ ಕನ್ನಡ ವಾಹಿನಿಗಳಲ್ಲಿ ಪ್ರಸಾರ ಆಗುತ್ತಿರುವ ಧಾರಾವಾಹಿಗಳ ಖಳನಾಯಕಿಯರನ್ನು ನೋಡಿದರೆ ಬೇತಾಳನ ಕಥೆ ನೆನಪಾಗುತ್ತದೆ. ತ್ರಿಲೋಕಗಳಲ್ಲಿಯೂ ಕಂಡೂ ಕೇಳರಿಯದ ತಂತ್ರ ಕುತಂತ್ರಗಳನ್ನು ಈ ಧಾರಾವಾಹಿಗಳಲ್ಲಿ ಮಾಡುತ್ತಾರೆ. ಸುಳ್ಳು ಸುಳ್ಳೇ ಗರ್ಭಿಣಿ ಎಂದು ತಿಂಗಳು ಗಟ್ಟಲೇ ಬೊಬ್ಬಿರಿಯುವ ಸೊಸೆಯಂದಿರು. ಮಗಳ ಬಾಳು ಹಾಳಾಗಿ ಹೋಗಿ ತನ್ನ ಮನೆಗೇ ಬರುವಂತೆ ಪ್ಲಾನ್ ಮೇಲೆ ಪ್ಲಾನ್ ಮಾಡುವ ಅಮ್ಮಂದಿರು.

ಹಾಲಿಗೆ ನಿಂಬೆ ಹಿಂಡುವ, ಮೆಟ್ಟಿಲ ಮೇಲೆ ಎಣ್ಣೆ ಚೆಲ್ಲುವ, ಊಟಕ್ಕೆ ವಿಷ ಬೆರೆಸುವ ನಿಪುಣರು. ವಾರಗಿತ್ತಿಯರ ಕರಾಮತ್ತಿಗೆ ಕೊನೆಯಿಲ್ಲ. ಆಸ್ತಿಗಾಗಿ ಬದುಕಿರುವ ತಾತನನ್ನೇ ಸತ್ತ ಎಂದು ಮೋಸ ಮಾಡುವ ಮೊಮ್ಮಗಳು! ಸ್ವತಃ ಮಾವನನ್ನು ಬೀದಿಯಲ್ಲಿ ಭಿಕ್ಷೆ ಬೇಡುವ ಹಾಗೆ ಮಾಡುವ ಆಧುನಿಕ ಕುತಂತ್ರಗಳು. ಹೀಗೇ ಹೇಳುತ್ತಾ ಹೋದರೆ ಅದು ಎಂದೂ ಮುಗಿಯದ ಕಥೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಹದಿನೈದೇ ಕಂತು ಸಾಕು

ಸ್ಪರ್ಧಾತ್ಮಕ ರೀತಿಯಲ್ಲಿ ಧಾರಾವಾಹಿಗಳನ್ನು ಪ್ರಸಾರ ಮಾಡುವಂತಿದೆ. ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ'ಯಲ್ಲಿ ಒಬ್ಬ ಹೆಣ್ಣಿನ ದಿಟ್ಟತನ ಮೆಚ್ಚುವಂತಿದೆ. ಕಥೆಯ ದೃಶ್ಯಗಳು ಪುನರಾವರ್ತನೆಯಾಗುತ್ತಿವೆ. ಹೆಚ್ಚಿನ ಪ್ರಸಂಗಗಳಲ್ಲಿ ಹೆಣ್ಣನ್ನು ಖಳನಾಯಕಿಯಾಗಿ ಚಿತ್ರಿಸುತ್ತಿದ್ದಾರೆ. 15 ಕಂತುಗಳ ಮಿತಿಯಲ್ಲೇ ಧಾರಾವಾಹಿ ರೂಪಿಸಿದರೆ ಅರ್ಥಪೂರ್ಣವಾಗಿರುತ್ತದೆ.

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು'ನಲ್ಲಿ ತಂದೆ–ತಾಯಿ ಮದುವೆ ಮಾಡಿಸುತ್ತಿರುವುದು ಮನೋಜ್ಞವಾಗಿ ಮೂಡಿಬರುತ್ತಿದೆ. ಮಗನೇ ತಾಯಿಯ ಮರುಮದುವೆ ಮಾಡುತ್ತಿರುವ ಸನ್ನಿವೇಶ ತುಂಬ ಚೆನ್ನಾಗಿ ತೋರಿಸಿದ್ದಾರೆ. ಇದರಲ್ಲೂ ಖಳಪಾತ್ರಗಳನ್ನು ತುಂಬಾ ಎಳೆಯುತ್ತಿದ್ದಾರೆ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಹಾಸ್ಯ ಅಲ್ಲ ಅಸಹ್ಯ

ಇತ್ತೀಚಿನ ದಿನಗಳಲ್ಲಿ ಹಾಸ್ಯ ಎಂದರೆ ಮುಜುಗರಪಡುವ ಸ್ಥಿತಿ ಉಂಟಾಗಿದೆ. ಝೀ ಕನ್ನಡದ 'ಕಾಮಿಡಿ ಕಿಲಾಡಿ' ಕಲರ್ಸ್ ಕನ್ನಡದ 'ಗಿಚ್ಚಿ ಗಿಲಿ ಗಿಲಿ' ರಿಯಾಲಿಟಿ ಶೋಗಳಲ್ಲಿ ಕಲಾವಿದರ ಬಾಯಲ್ಲಿ ಕೇಳಿಬರುವ ಅಶ್ಲೀಲ ಪದಗಳು, ದ್ವಂದ್ವಾರ್ಥದ ಸಂಭಾಷಣೆಗಳು ನಿಜಕ್ಕೂ ಅಸಹ್ಯವೆನ್ನಿಸುತ್ತದೆ. ತೀರ್ಪುಗಾರರ ಸ್ಥಾನದಲ್ಲಿ ಕುಳಿತ ಕಲಾವಿದರೂ ಮುಜುಗರ ವ್ಯಕ್ತಪಡಿಸಿದ ಸನ್ನಿವೇಶವೂ ಇದೆ. ಮನೆಮಂದಿಯ ಜೊತೆ ಇಂತಹ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಾಧ್ಯವೇ? ಕೀಳು ಅಭಿರುಚಿಯ ಮಾತುಗಳು ನಿಜಕ್ಕೂ ಹಾಸ್ಯಕ್ಕೆ ಮಾಡುತ್ತಿರುವ ಅವಮಾನ.

—ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ

## ಟೈಮ್ ಪಾಸ್ ಧಾರಾವಾಹಿ

ಟೀವಿ ಧಾರಾವಾಹಿಗಳೆಲ್ಲಾ ಚೆನ್ನಾಗಿರುತ್ತವೆ ಮತ್ತು ನೋಡಿಸಿಕೊಂಡು ಹೋಗುತ್ತವೆ ಎಂದು ಹೇಳಲಾಗದು. ಬಹುತೇಕ ಸಂದರ್ಭಗಳಲ್ಲಿ ಇದು ವೀಕ್ಷಕರ ಅಭಿರುಚಿಯ ಮೇಲೂ ಇರುತ್ತದೆ. ನಿರ್ಮಾಪಕರು, ನಿರ್ದೇಶಕರು, ಪಾತ್ರಧಾರಿಗಳು, ಕಥೆ ಮತ್ತು ಸಂಭಾಷಣೆ ಒಂದು ಧಾರಾವಾಹಿಯನ್ನು ಪೋಷಿಸುತ್ತವೆ.

ಪಾತ್ರಧಾರಿಗಳು ಧಾರಾವಾಹಿಯನ್ನು ಜನಪ್ರಿಯಗೊಳಿಸುವಂತಿದ್ದರೆ 'ಕನ್ಯಾದಾನ'... 'ಕನ್ನಡತಿ' ಯಶಸ್ಸಿನ ಅಮ್ಮಮ್ಮ 'ಬೃಂದಾವನ'ವನ್ನು ಬೆಳಗಬೇಕಿತ್ತು. ಕನ್ನಡ ಟೀವಿ ಧಾರಾವಾಹಿ ಲೋಕದಲ್ಲಿ ಹಳಬರು ನೇಪಥ್ಯಕ್ಕೆ ಸರಿದಂತೆ ಕಾಣುತ್ತಿದೆ. ಧಾರಾವಾಹಿ ವೀಕ್ಷಣೆಯಲ್ಲಿ ಹಿಂದಿನ ಉತ್ಸುಕತೆ ಕಾಣುತ್ತಿಲ್ಲ. ಇದು ಕಾಟಾಚಾರದ ಟೈಮ್ ಪಾಸ್ ಆಗಿದೆ.

—ರಮಾನಂದ ಶರ್ಮಾ, ಬೆಂಗಳೂರು



## ಮೌಲ್ಯಗಳಿಗಾಗಿ ಕಥೆ

ಝೀ ಕನ್ನಡದ 'ಲಕ್ಷ್ಮಿ ನಿವಾಸ' ಅರ್ಥಪೂರ್ಣವಾಗಿದೆ. ಇದರ ನಟರ ನೈಜ ಅಭಿನಯವೂ ಮೆಚ್ಚುವಂತಹದ್ದು. ಇದರಲ್ಲಿ ಮಧ್ಯಮ ವರ್ಗದವರ ಮಾನವೀಯ ಮೌಲ್ಯಗಳಿಗೆ ಜೀವ ತುಂಬಿದ್ದಾರೆ. ಕಷ್ಟ ಸುಖಗಳಿಗೆ ಜಗ್ಗದೆ ತಮ್ಮ ಜೀವನಕ್ಕೆ ಶ್ರೇಷ್ಠತೆಯನ್ನು ತಂದುಕೊಳ್ಳುವ ಹೋರಾಟವೇ ಬದುಕಿನ ಸಾರ್ಥಕತೆ ಎನ್ನುವ ಅಂಶವೇ ಈ ಧಾರಾವಾಹಿಯ ಜೀವಾಳ ಎನ್ನಬಹುದು.

—ಕುಬೇರಪ್ಪ ಎಂ. ವಿಭೂತಿ, ಹರಿಹರ



## ಕುತೂಹಲದ ಸಂಸಾರ...

ಸ್ಟಾರ್ ಸುವರ್ಣದ 'ಜಾನಕಿ ಸಂಸಾರ' ಉತ್ತಮವಾಗಿದೆ. ಜಾನಕಿಯ ಪಾತ್ರವನ್ನು ಅಂಜನಾ ಚೆನ್ನಾಗಿ ನಿಭಾಯಿಸುತ್ತಿದ್ದಾರೆ. ಆಕೆಗೆ ಕುಟುಂಬದ ಮೇಲೆ ತುಂಬಾ ಜವಾಬ್ದಾರಿ ಇದೆ. ಸಮಯಕ್ಕೆ ಸರಿಯಾಗಿ ಏನು ಮಾಡಬೇಕು ಎಂಬ ವಿವೇಕ ಆಕೆಗೆ ಚೆನ್ನಾಗಿದೆ.

ಜಾನಕಿಯ ಸಂಸಾರದಲ್ಲಿ ಏನಾದರೂ ಅಪವಾದವನ್ನು ಹುಟ್ಟುಹಾಕಲು ಅನಾಮಿಕಾ ಯೋಚಿಸುತ್ತಾಳೆ. ಜಾನಕಿಯ ಪತಿ ರಾಘವ ತನ್ನ ಪತ್ನಿಯ ಮೇಲೆ ಅಪಾರ ವಿಶ್ವಾಸವನ್ನು ಇಟ್ಟಿರುತ್ತಾನೆ. ರೈತರಿಗೆ ಕೊಡುವ ಗೊಬ್ಬರವನ್ನು ಅನಾಮಿಕಾ ಕಲಬೆರಕೆ ಮಾಡಿಸುತ್ತಾಳೆ. ಬೆಳೆ ಹಾನಿಯಿಂದ ಆದ ನಷ್ಟವನ್ನು ನಿಭಾಯಿಸಲಾಗದೆ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅದಕ್ಕೆ ರಾಘವನ ಬಂಧನವಾಗುತ್ತದೆ. ಅನಾಮಿಕಾ ಮಾಡಿದ ಕೃತ್ಯಗಳು ಆಕೆಯ ತಂದೆಗೂ ಗೊತ್ತಾಗುತ್ತದೆ. ಒಟ್ಟಾರೆ ಮುಂದಿನ ಕಥೆ ಕುತೂಹಲವನ್ನು ಹುಟ್ಟಿಸಿದೆ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

## ನವರಸ ನಾಯಕ ಕಣ್ಣೀರಾದಾಗ

ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ವೀಕ್ಷಿಸಿದವರಿಗೆ ಕಣ್ಣೀರಿಡುವ ಹೃದಯಸ್ಪರ್ಶಿ ಅನುಭವವೂ ಆಗಿರಬಹುದು. ಸದಾ ನಗುವನ್ನೇ ಪಸರಿಸುವ ಜಗ್ಗೇಶ್ ಸಿನಿಮಾ ನೋಡಲು ಚಿತ್ರಮಂದಿರಕ್ಕೆ ಬಾರದ ಪ್ರೇಕ್ಷಕರನ್ನು ನೆನೆದು ಮರುಗಿದರು. ಬಿಗ್ ಬಜೆಟ್ ಚಿತ್ರಗಳನ್ನು ಮಾತ್ರ ವೀಕ್ಷಿಸುವ ಪ್ರೇಕ್ಷಕರು ಹೆಚ್ಚಾಗುತ್ತಿದ್ದಾರೆ. ತಮ್ಮ ಇತ್ತೀಚಿನ 'ರಂಗನಾಯಕ' ಚಿತ್ರದ ಬಗ್ಗೆಯೂ ಮಾತನಾಡಿದರು. ಅವರ ಆತ್ಮೀಯರೇ ಆ ಚಿತ್ರದ ಬಗ್ಗೆ ಅಪಪ್ರಚಾರ ಮಾಡಿದ್ದರ ಬಗ್ಗೆ ನೊಂದು ನುಡಿದರು.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಜಿಪಿಎಸ್ ಇರುವುದು ಏತಕ್ಕೆ?

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ' ಮೊದಮೊದಲು ಕಾದು ನೋಡುವಷ್ಟು ಚೆನ್ನಾಗಿತ್ತು. ಈಚೆಗೆ ಬಹಳ ನೀರಸವಾಗಿದೆ. ಸುಂದರಿ ಮತ್ತು ಪೂಜಾಳ ಕುತಂತ್ರ, ಭಾಗ್ಯಾ ತನ್ನತನ ಮರೆತು ಶ್ರೇಷ್ಠಾಳಿಗೆ ಹೊಡೆಯುತ್ತಾಳೆ. ಜಿಪಿಎಸ್ ಮಾರ್ಗಸೂಚಿಯನ್ನು ಬಳಸದೆ ಸುಂದರಿಯ ಮಾತು ಕೇಳುವುದು ಪೆದ್ದುತನ. ವೀಕ್ಷಕರ ತಾಳ್ಮೆ ಪರೀಕ್ಷಿಸುವಂತೆ ಕಥೆ ದಿಕ್ಕಾಪಾಲಾಗಿರುವುದನ್ನು ಆದಷ್ಟು ಬೇಗ ಸೀರಿಯಲ್ ಮುಗಿಸುವಂತಾಗಲಿ.

—ಸೀತಾ ಕೇಶವ ಸಿದ್ದಿ